ಎಂ ವಿ ಸಿ ನಂ. 250/2022

ಪಿ ಡಬ್ಲ್ಯೂ: 1

ದಿನಾಂಕ 20-06-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 3ನೇ ಎದುರುದಾರರ ಪರ: ಶ್ರೀ ಕೆ ಎ ವಕೀಲರಿಂದ:

ನಾನು ಕಡೂರಿನಲ್ಲಿ ವಾಸಿಸುತ್ತಿದ್ದೇನೆ. ಅಪಘಾತವಾದ ಸಮಯದಲ್ಲಿ ನನ್ನ ಗಂಡ ಸಹ ಕಡೂರಿನಲ್ಲಿ ವಾಸಿಸುತ್ತಿದ್ದರು. ನನ್ನ ಗಂಡನ ಸ್ವಂತ ಊರು ಕಡೂರು ತಾಲ್ಲೂಕಿನ ಬಿಟ್ಟೇನಹಳ್ಳಿ ಗ್ರಾಮ, ಕಣಕಟ್ಟೆ ಪೋಸ್ಟ. ಅಪಘಾತವಾದ ದಿನ ನನ್ನ ಗಂಡ ಬಿಟ್ಟೇನಹಳ್ಳಿಯಿಂದ ಕಡೂರಿಗೆ ಬರುತ್ತಿದ್ದರು. ಪ್ರಸ್ತುತ ಪ್ರಕರಣ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನನ್ನ ಮಾವನಾದ ತುಂಬೆಗೌಡ ಇವರು ನೀಡಿರುತ್ತಾರೆ. ನನ್ನ ಅರ್ಜಿಯಲ್ಲಿ ನನ್ನ ಗಂಡ ಬಿಟ್ಟೇನಹಳ್ಳಿ ಗ್ರಾಮಕ್ಕೆ ಹೋಗುವಾಗ ಅಪಘಾತವಾಗಿದೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳವನ್ನು ನಾನು ನೋಡಿರುತ್ತೇನಾ ಎಂದರೆ ಸಾಕ್ಷಿ ಅಪಘಾತವಾದ ಮರುದಿನ ನಾನು ನೋಡಿರುತ್ತೇನೆ ಎಂದು ಹೇಳಿರುತ್ತಾರೆ. ಅಪಘಾತವಾಗಿದೆ ಎಂದು ಹೇಳಲಾದ ಸಿಂಗಟಗೆರೆಯಿಂದ 9ನೇ ಮೈಲಿಗಲ್ಲಿಗೆ ಹೋಗುವ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಗೆ ಅಡ್ಡಲಾಗಿ ಅಪಘಾತವಾಗಿದೆ ಎಂದು ಹೇಳಲಾದ ಜಾಗದಲ್ಲಿ ಅಪ್ಪರ್ ಭದ್ರಾ ಯೋಜನೆಯ ಕೆನಲ್ ನಿರ್ಮಾಣದ ಕಾಮಗಾರಿ ನಡೆಯುತ್ತಿತ್ತು ಎಂದರೆ ಸರಿ. ಆ ಕಾರಣದಿಂದ ಸದರಿ ಸ್ಥಳದಲ್ಲಿ ಒಂದು ಬದಲಿ ರಸ್ತೆ ವ್ಯವಸ್ಥೆಯನ್ನು ಮಾಡಲಾಗಿತ್ತು ಎಂದರೆ ಸರಿ. ಮುಖ್ಯ ರಸ್ತೆಯನ್ನು ಮಣ್ಣಿನ ತಡೆಗೋಡೆ ನಿರ್ಮಿಸಿ ಬದಲಿ ರಸ್ತೆಯನ್ನು ತೋರಿಸಲಾಗಿತ್ತು ಎಂದರೆ ಸಾಕ್ಷಿ ಮಣ್ಣಿನ ತಡೆಗೋಡೆ ಬದು ರೂಪದಲ್ಲಿ ಇತ್ತು ಎಂದು ನುಡಿದಿರುತ್ತಾರೆ. ಸದರಿ ತಡೆಗೋಡೆ 6 ಅಡಿ

ಎತ್ತರ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 2 ರಿಂದ 2.5 ಅಡಿ ಮಾತ್ರ ಇತ್ತು ಎಂದು ನುಡಿಯುತ್ತಾರೆ.

2. ಅಪಘಾತದ ಬಗ್ಗೆ ನನ್ನ ಮಾವನಾದ ತುಂಬೇಗೌಡರವರಿಂದ ತಿಳಿದು ಬಂದಿರುತ್ತದೆ. ನನ್ನ ಮಾವನವರೇ ಅಪಘಾತದ ಬಗ್ಗೆ ಪೋಲೀಸರಿಗೆ ದೂರು ನೀಡಿರುತ್ತಾರೆ. ಯಾವುದೋ ವಾಹನ ನನ್ನ ಗಂಡನಿಗೆ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿದೆ ಎಂದು ದೂರಿನಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಅಪಘಾತವನ್ನು ನನ್ನ ಮಾವ ನೋಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮನೆಗೆ ಬಾರದೆ ಇದ್ದರಿಂದ ನನ್ನ ಮಾವ ಅವರನ್ನು ಹುಡುಕಿಕೊಂಡು ಹೋಗುವಾಗ ಅಪಘಾತವಾಗಿರುವ ವಿಚಾರ ಗೊತ್ತಾಗಿದೆ ಎಂದು ನುಡಿದಿರುತ್ತಾರೆ. ಆ ರೀತಿ ರಾತ್ರಿ ಸುಮಾರು 11 ರಿಂದ 11.30 ರ ಸಮಯದಲ್ಲಿ ನನ್ನ ಮಾವ ಅಪಘಾತದ ಸ್ಥಳವನ್ನು ನೋಡಿರುತ್ತಾರೆ. ಅಪಘಾತವಾದ ದಿನ ನನ್ನ ಗಂಡ ರಾತ್ರಿ ಸುಮಾರು 7.30 ಕ್ಕೆ ಬಿಟ್ಟೇನಹಳ್ಳಿಯನ್ನು ಹೊರಟಿರುತ್ತಾರೆ, 9.00 ಗಂಟೆಯಾದರೂ ನನ್ನ ಗಂಡ ಮನೆಗೆ ಬಾರದೆ ಇದ್ದ ಕಾರಣ ನನ್ನ ಮಾವ ಹುಡುಕಿಕೊಂಡು ಹೋಗಿರುತ್ತಾರೆ. ರಸ್ತೆಗೆ ನಿರ್ಮಿಸಿದ್ದ ತಡೆಗೋಡೆಯಿಂದ ಸುಮಾರು 40 ಅಡಿ ದೂರದಲ್ಲಿ ನನ್ನ ಗಂಡ ಬಿದ್ದಿರುತ್ತಾರೆ ಎಂದರೆ ಸಾಕ್ಷಿ ವಾಹನ ಹಿಂದುಗಡೆಯಿಂದ ಅಪಘಾತ ಪಡಿಸಿದ ರಭಸಕ್ಕೆ ಅಷ್ಟು ದೂರ ಹೋಗಿ ಬಿದ್ದಿರುತ್ತಾರೆ ಎಂದು ನುಡಿಯುತ್ತಾರೆ.

3. ಅಪಘಾತದಲ್ಲಿ 1 ನೇ ಎದುರುದಾರರ ಯಾವುದೇ ನಿರ್ಲಕ್ಷತನ ಇರಲಿಲ್ಲ ಎಂದರೆ ಸರಿಯಲ್ಲ. ಕೆಎ-28 / ಸಿ-0279 ರ ವಾಹನಕ್ಕೂ ನನ್ನ ಗಂಡನ ಸಾವಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸದರಿ ವಾಹನದಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ದಿನ ನನ್ನ ಗಂಡ ಅತೀವೇಗವಾಗಿ ಬೈಕನ್ನು ಚಾಲನೆ ಮಾಡಿಕೊಂಡು ಬಂದು ತಡೆಗೋಡೆಯನ್ನು ಗುದ್ದಿ ಅದನ್ನು ದಾಟಿಸಿಕೊಂಡು ಕೆನಲ್ ಒಳಗೆ ಬಿದ್ದು ಸ್ವತಪ್ಪಿನಿಂದ ಮರಣಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಗಂಡ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಬೈಕನ್ನು ಚಾಲನೆ ಮಾಡಲು ಚಾಲನಾ ಪರವಾನಿಗಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಚಾಲನಾ ಪರವಾನಿಗಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ತನ್ನ ಬಳಿ ಸದರಿ ಚಾಲನಾ ಪರವಾನಿಗಿ ಇದೆ ಎಂದು ನುಡಿಯುತ್ತಾರೆ. ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಗಂಡನಿಗೆ ಯಾವುದೇ ಚಾಲನೆ ಪರವಾನಿಗಿ ಇರಲಿಲ್ಲ ಮತ್ತು ನನ್ನ ಗಂಡನಿಗೆ ಬೈಕನ್ನು ಚಾಲನೆ ಮಾಡಲು ಬರುತ್ತಿರಲಿಲ್ಲ, ಆದ್ದರಿಂದ ಅಪಘಾತವನ್ನು ಸ್ವತಪ್ಪಿನಿಂದ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಗಂಡನ ತಲೆಗೆ ಬಲವಾದ ಪೆಟ್ಟು ಬಿದ್ದ ಕಾರಣ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ನನ್ನ ಗಂಡ ಸರಿಯಾದ ರೀತಿಯಲ್ಲಿ ಹೆಲ್ಮೆಟ್‌ನ್ನು ಧರಿಸಿದ್ದರೆ ತಲೆಗೆ ಯಾವುದೇ ಪೆಟ್ಟು ಬೀಳುತ್ತಿರಲಿಲ್ಲ ಎಂದರೆ ಸಾಕ್ಷಿ ಅವರು ಸರಿಯಾದ ರೀತಿಯಲ್ಲೆ ಹೆಲ್ಮೆಟ್ ಧರಿಸಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ ಮೋಟಾರು ವಾಹನಗಳ ಕಾಯಿದೆಯನ್ನು ಉಲ್ಲಂಘನೆ ಮಾಡಿ ವಾಹನ ಚಾಲನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ಅಪಘಾತವಾದ ದಿನ ನನ್ನ ಗಂಡ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನ ನನ್ನ ಮಾವನಿಗೆ ಸೇರಿದ್ದಾಗಿರುತ್ತದೆ. ಅಪಘಾತವಾದ ನಂತರ ಸದರಿ ದ್ವಿಚಕ್ರ ವಾಹನವನ್ನು ನೋಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಅಪಘಾತವಾದ ನಂತರ ಪೋಲೀಸರು ಸದರಿ ವಾಹನವನ್ನು

ಅಮಾನತ್ತು ಪಡಿಸಿ ಆರ್ ಟಿ ಒ ಅಧಿಕಾರಿಗಳಿಂದ ತಪಾಸಣೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಾಹನವನ್ನು ನಿಪಿ-7 ರಂತೆ ನಾನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ರ ವರದಿಯ ಪ್ರಕಾರ ದ್ವಿಚಕ್ರ ವಾಹನದ ಮುಂಭಾಗ ಸಂಪೂರ್ಣವಾಗಿ ಜಕ್ಕಂಗೊಂಡಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ವರದಿಯಂತೆ ನನ್ನ ಗಂಡನ ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನದ ಹಿಂಭಾಗಕ್ಕೆ ಕಡಿಮೆ ಜಕ್ಕಂಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದ್ವಿಚಕ್ರ ವಾಹನದ ಹಿಂಭಾಗಕ್ಕೆ ಆಗಿರುವ ಡ್ಯಾಮೇಜುಗಳನ್ನು ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ಗಂಡನ ಸ್ವ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ.

5. ಕೆಎ-28 / ಸಿ- 0279 ರ ಗೂಡ್ಸ ವಾಹನದಿಂದ ಅಪಘಾತವಾಗಿದೆ ಎಂದು ಪೋಲೀಸರು ತಿಳಿಸಿರುತ್ತಾರೆ. ಸದರಿ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ಸಾಕ್ಷಿಗಳು ಯಾರು ಸಹ ನನಗೆ ಗೊತ್ತಿಲ್ಲ. ಸದರಿ ಅಪಘಾತವನ್ನು ಪ್ರತ್ಯಕ್ಷವಾಗಿ ಯಾರು ಸಹ ನೋಡಿಲ್ಲ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 3 ನೇ ಎದುರುದಾರರಿಂದ ಅಕ್ರಮವಾಗಿ ಪರಿಹಾರ ಪಡೆಯುವ ಉದ್ದೇಶದಿಂದ ಅರ್ಜಿದಾರರಾದ ನಾವು, 1 ಮತ್ತು 2 ನೇ ಎದುರುದಾರರು ಪೋಲೀಸರ ಜತೆ ಷರೀಕ್ಕಾಗಿ ಮೇಲೆ ಹೇಳಿದ ಗೂಡ್ಸ ವಾಹನವನ್ನು ಪ್ರಕರಣದಲ್ಲಿ ಸಿಲುಕಿಸಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಎದುರುದಾರರು ಯಾವುದೇ ಪರಿಹಾರವನ್ನು ನೀಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

6. ನನ್ನ ಗಂಡ ನರ್ಸಿಂಗ್ ಆಫೀಸರಾಗಿ ಸೇವೆ ಸಲ್ಲಿಸುತ್ತಿದ್ದರು. ನನ್ನ ಅತ್ತೆ ಮತ್ತು ಮಾವ ಪ್ರಸ್ತುತ ಬಿಟ್ಟೇನಹಳ್ಳಿಯಲ್ಲಿ ವಾಸ ಮಾಡುತ್ತಿದ್ದಾರೆ. ಅವರ ಮೂಲತಃ ವ್ಯವಸಾಯಗಾರರಾಗಿರುತ್ತಾರೆ. ಅವರಿಗೆ ಸೇರಿದ ಸ್ವಲ್ಪ ತೋಟ ಇದೆ, ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ನನ್ನ ಮಾವನಿಗೆ ಇಬ್ಬರು ಗಂಡು ಮಕ್ಕಳು. ನನ್ನ ಮಾವನ ಜತೆ ಊರಿನಲ್ಲಿ ಯಾರು ಇರುವುದಿಲ್ಲ. ಜಮೀನಿನಿಂದ ಬಂದ ಆದಾಯ ನನ್ನ ಅತ್ತೆ ಮಾವರವರ ಜೀವನಕ್ಕೆ ಸಾಕಾಗುತ್ತದೆ ಎಂದರೆ ಸಾಕ್ಷಿ ನಾನು ಮತ್ತು ನನ್ನ ಗಂಡ ನೋಡಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ. ನನ್ನ ಅತ್ತೆ ಮತ್ತು ಮಾವ ಬಿಟ್ಟೇನಹಳ್ಳಿಯಲ್ಲಿ ವಾಸ ಇರುವುದರಿಂದ ನನ್ನ ಗಂಡನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸಾಕ್ಷಿ ನಾವು ಉದ್ಯೋಗದ ದೃಷ್ಟಿಯಿಂದ ಕಡೂರಿನಲ್ಲಿದ್ದು, ಅತ್ತೆ ಮತ್ತು ಮಾವರನ್ನು ಸಹ ನನ್ನ ಗಂಡ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

7. ನನ್ನ ಗಂಡನ ಮಾಸಿಕ ವೇತನವನ್ನು ತೋರಿಸಲು ನಿಪಿ-18 ರ ವೇತನ ಪ್ರಮಾಣ ಪತ್ರ ಮತ್ತು ನಿಪಿ-19ರ ಅಕೌಂಟ್ ಎಕ್ಸಟ್ರಾಕ್ಟನ್ನು ಹಾಜರುಪಡಿಸಿರುತ್ತೇನೆ. ನಿಪಿ-19ರ ದಾಖಲೆಯ ಪ್ರಕಾರ ನನ್ನ ಗಂಡನ ಖಾತೆಗೆ ಮಾಸಿಕ 43-45 ಸಾವಿರ ರೂ ಮಾತ್ರ ಜವೆಯಾಗುತ್ತಿತ್ತು ಎಂದರೆ ಸಾಕ್ಷಿ ಅವರ ಮಾಸಿಕ ವೇತನ 61,323/- ರೂ ಆಗಿದ್ದು, ಕಡಿತಗೊಂಡ ನಂತರ 43-45 ಸಾವಿರ ರೂ ಹಣ ಜಮೆಯಾಗುತ್ತಿತ್ತು ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ಕಡಿಮೆ ವೇತನ ಇದ್ದರೂ ಸಹ ಹೆಚ್ಚಿನ ಪಡೆಯುತ್ತಿದ್ದರು ಎಂದು ಅರ್ಜಿಯಲ್ಲಿ ಕಾಣಿಸಲಾಗಿದೆ ಎಂದರೆ ಸಾಕ್ಷಿಯು ಎಷ್ಟು ವೇತನ ಇದೆಯೋ ಅದನ್ನೆ ತೋರಿಸಲಾಗಿದೆ ಎಂದು ನುಡಿದಿರುತ್ತಾರೆ. ನನ್ನ ಗಂಡನ ಮರಣದ ನಂತರ ನನಗೆ ಪಿಂಚಣಿ ಬರುತ್ತಿದೆ ಎಂದರೆ ಸಾಕ್ಷಿ

ನನ್ನ ಗಂಡ 2008 ರಲ್ಲಿ ಕೆಲಸಕ್ಕೆ ಸೇರಿದ್ದು, ಅವರು ಎನ್ ಪಿ ಎಸ್ ವ್ಯಾಪ್ತಿಗೆ ಬರುವುದರಿಂದ ಯಾವುದೇ ಪಿಂಚಣಿ ಬರುತ್ತಿಲ್ಲ ಎಂದು ನುಡಿಯುತ್ತಾರೆ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ನನ್ನ ಗಂಡನಿಗೆ ಹೆಚ್ಚಿನ ಆದಾಯ ಇತ್ತು ಎಂದು ಸುಳ್ಳು ಮಾಹಿತಿ ನೀಡಿರುತ್ತೇವೆ ಎಂದರೆ ಸರಿಯಲ್ಲ.

8. ನನ್ನ ಗಂಡ ಮರಣ ಹೊಂದಿದಾಗ ಅವರಿಗೆ 39 ವರ್ಷ ವಯಸ್ಸಾಗಿತ್ತು. ನನ್ನ ಗಂಡನ ವಯಸ್ಸನ್ನು ತೋರಿಸಲು ನಿಪಿ-17 ರ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಿಪಿ-17 ರ ದಾಖಲೆಯಲ್ಲಿ ಹುಟ್ಟಿದ ವರ್ಷವನ್ನು ಮಾತ್ರ ನಮೂದು ಮಾಡಲಾಗಿದೆ ಎಂದರೆ ಸರಿ. ನನ್ನ ಗಂಡನ ಎಸ್ ಎಸ್ ಎಲ್ ಸಿ ಅಂಕಪಟ್ಟಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ಗಂಡ ಮರಣ ಹೊಂದುವ ಸಮಯದಲ್ಲಿ ಸುಮಾರು 46 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದ್ದರೂ ಹೆಚ್ಚಿನ ಪರಿಹಾರ ಪಡೆಯಲು 39 ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ಗಂಡನಿಗೆ ಅಪಘಾತವಾಗುವ ಮೊದಲು ನಾನು ಸರ್ಕಾರಿ ನೌಕರಳು ಎಂದರೆ ಸರಿ. ನನಗೆ ವೇತನ ಬರುತ್ತಿದ್ದ ಕಾರಣ ನಾನು ನನ್ನ ಗಂಡನ ಆದಾಯದ ಮೇಲೆ ಅವಲಂಬಿತವಾಗಿರಲಿಲ್ಲ ಎಂದರೆ ಸಾಕ್ಷಿ ನಮಗೆ ಇಬ್ಬರು ಮಕ್ಕಳು ಇದ್ದು, ಪ್ರಸ್ತುತ ಪರಿಸ್ಥಿತಿಯಲ್ಲಿ ಅವರನ್ನು ಸಾಕಲು ನಾನು ನನ್ನ ಗಂಡನ ಆದಾಯದ ಮೇಲೆ ಅವಲಂಬಿತಳಾಗಿದ್ದೆ ಎಂದು ನುಡಿಯುತ್ತಾರೆ. 1 ನೇ ಎದುರುದಾರರಿಗೆ ಗೂಡ್ಸ ವಾಹನ ಚಾಲನೆ ಮಾಡಲು ಯಾವುದೇ ಚಾಲನಾ ಪರವಾನಿಗಿ ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಚಾಲನಾ ಪರವಾನಿಗಿ ಇದೆ ಎಂದು ನುಡಿಯುತ್ತಾರೆ. 2 ನೇ ಎದುರುದಾರರು ವಿಮಾ

ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದರಿಂದ 3 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಸ್ವತಪ್ಪಿನಿಂದ ಅಪಘಾತ ಮಾಡಿಕೊಂಡಿರುವುದರಿಂದ ಹಾಗೂ 2 ನೇ ಎದುರುದಾರರ ಗೂಡ್ಸ ವಾಹನ ಸದರಿ ಅಪಘಾತದಲ್ಲಿ ಭಾಗಿಯಾಗಿದೆ ಇರುವುದರಿಂದ 3 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸಾಕ್ಷಿ ಅಪಘಾತವು 2 ನೇ ಎದುರುದಾರರ ಗೂಡ್ಸ ವಾಹನದಿಂದಲೇ ಆಗಿದೆ ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.